**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಸಿ.ಸಿ. ಸಂಖ್ಯೆ. 1792/2019**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ಗ್ರಾಮಾಂತರ ಪೊಲೀಸ್ ಠಾಣೆ, ನಂಜನಗೂಡು.

- ವಿರುದ್ಧ -

**ಆರೋಪಿಃ** ಶ್ರೀ ಮಸಣಶೆಟ್ಟಿ ಬಿನ್ ಲೇಟ್ ಮಾದಶೆಟ್ಟಿ
ವಯಸ್ಸು ಸುಮಾರು 65 ವರ್ಷ,
ವಾಸಃ ಹೆಗ್ಗಡಹಳ್ಳಿ, ನಂಜನಗೂಡು ತಾಲ್ಲೂಕು,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ-1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ?

**ಉತ್ತರಃ**

**ಪ್ರಶ್ನೆ-2.** ಫ್ರಾಸಾ-1 ಶ್ರೀ.ಪುನೀತ್ ಬಿ.ಎನ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 31.03.2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಹೆಗ್ಗಡಹಳ್ಳಿ ಗ್ರಾಮದಲ್ಲಿ ಆರೋಪಿ ತನ್ನ ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ಅದರಂತೆ ನಮ್ಮ ಸಿಬ್ಬಂದಿಗಳ ಮೂಲಕ ಪಂಚರನ್ನು ಠಾಣೆಗೆ ಬರಮಾಡಿಕೊಂಡು ತಾನು, ಚಾಸಾ-2, 3, 5 ರಿಂದ 7 ರವರು ಇಲಾಖಾ ವಾಹನದಲ್ಲಿ ಸಂಜೆ 6.30 ಗಂಟೆಗೆ ಹೆಗ್ಗಡಹಳ್ಳಿ ಗ್ರಾಮಕ್ಕೆ ಹೋಗಿ ವಾಹನವನ್ನು ಮರೆಯಾಗಿ ನಿಲ್ಲಿಸಿ ನೋಡಿದಾಗ ಆರೋಪಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ ಎಲ್ ನ 71 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿಯ ಮಧ್ಯದ ಪೌಚುಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುತ್ತಾರೆಂದು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಉತ್ತರಃ**

**ಪ್ರಶ್ನೆ-3.** ಫ್ರಾಸಾ-1 ಶ್ರೀ.ಟಿ.ಎಂ. ಪುನೀತ್, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ತನಗೆ ಯಾವುದೇ ರಹದಾರಿ ಇರುವುದಿಲ್ಲವೆಂದು ಹೇಳಿರುತ್ತಾರೆ ಮತ್ತು ಸದರಿ ಮಧ್ಯದ ಪೌಚುಗಳನ್ನು ನಂಜನಗೂಡಿನ ಗುರುರಾಜ ವೈನ್ ಸ್ಟೋರ್ ನಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಎಲ್ಲಾ ಮಧ್ಯದ ಪೌಚುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ M ಎಂಬ ಅಕ್ಷರದಿಂದ ಸೀಲ್ ಮಾಡಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚುಗಳನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ಸ್ಥಳದಲ್ಲಿ ನಿಶಾನೆ ಪಿ-1 ರಂತೆ ಪಂಚರ ಸಮಕ್ಷಮ ಮಹಜರ್ ಜರುಗಿಸಿರುತ್ತಾರೆ. ತಾನು ವಶಪಡಿಸಿಕೊಂಡ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚುಗಳನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-1ರವರು ನ್ಯಾಯಾಲಯದಲ್ಲಿರುವ 71 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿಯ ಮಧ್ಯದ ಪ್ಯಾಕೇಟುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು- 1 ರಿಂದ 71 ಎಂದು ಗುರುತಿಸುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಉತ್ತರಃ**

**ಪ್ರಶ್ನೆ-4.** ಫ್ರಾಸಾ-1 ಶ್ರೀ.ಟಿ.ಎಂ. ಪುನೀತ್, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ಆರೋಪಿ ಮತ್ತು ವಶಪಡಿಸಿಕೊಂಡ ಸ್ವತ್ತು ಸಮೇತ ಸಂಜೆ 8.00 ಗಂಟೆಗೆ ಠಾಣೆಗೆ ಬಂದು ಸ್ವ-ವರದಿ ತಯಾರಿಸಿ ಚಾಸಾ-10 ರವರಿಗೆ ಸಲ್ಲಿಸಿರುತ್ತೇನೆ. ನಿಶಾನೆ ಪಿ-2 ರಂತೆ ಸ್ವ ವರದಿಯನ್ನು ನೋಡಿ ಗುರುತಿಸುತ್ತೇನೆಂದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಉತ್ತರಃ**

**ಪ್ರಶ್ನೆ-5.** ಫ್ರಾಸಾ-2 ಶ್ರೀ.ಶಿವಯ್ಯ, ಇವರು ತಮ್ಮ ಸಾಕ್ಷ್ಯದಲ್ಲಿ ನಿಶಾನೆ ಪಿ-1 ರಂತೆ ತನ್ನ ಸಹಿ ಇದ್ದು, ಸದರಿ ಸಹಿಯನ್ನು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆಂದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಉತ್ತರಃ**

**ಪ್ರಶ್ನೆ-6.** ಫ್ರಾಸಾ-1 ಶ್ರೀ.ಕವೀಶ್ ಕೆ.ಎನ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 31.03.2019 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ-

1ರವರು ಠಾಣೆಗೆ ಹಾಜರಾಗಿ ನಿ.ಪಿ-2ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ತನಿಖೆ ಮುಂದುವರಿಸಿ ನನ್ನ ಮುಂದೆ ಹಾಜರುಪಡಿಸಿದ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ಸ್ವತ್ತುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮವಹಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿವಸ ಚಾಸಾ-2, 3, 5 ರಿಂದ 7ರವರ ಹೇಳಿಕೆ ಪಡೆದಿರುತ್ತೇನೆ. ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟು, ದಿನಾಂಕ 24.07.2019 ರಂದು ರಾಸಾಯನಿಕ ವಿಶ್ಲೇಷಣಾ ವರದಿ ಪಡೆದಿರುತ್ತೇನೆ. ನಿಶಾನೆ ಪಿ-5 ರಂತೆ ಚಾಸಾ-1ರವರು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನೋಡಿ ಗುರುತಿಸಲಾಯಿತು. ನಂತರ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಉತ್ತರಃ**

**ಪ್ರಶ್ನೆ-7.** ಫ್ರಾಸಾ-4 ಶ್ರೀ.ರಾಜು ಕೆ.ಎನ್, ಇವರು ತಮ್ಮ ಸಾಕ್ಷ್ಯದಲ್ಲಿ ನಿಶಾನೆ ಪಿ-1ರಂತೆ ತನ್ನ ಸಹಿ ಇದ್ದು, ಸದರಿ ಸಹಿಯನ್ನು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆಂದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಉತ್ತರಃ**

**ಪ್ರಶ್ನೆ-8.** ಫ್ರಾಸಾ-1 ಶ್ರೀ.ಸುರೇಶ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 31.03.2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಹೆಗ್ಗಡಹಳ್ಳಿ ಗ್ರಾಮದಲ್ಲಿ ಆರೋಪಿ ತನ್ನ ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ಅದರಂತೆ ನಮ್ಮ ಸಿಬ್ಬಂದಿಗಳ ಮೂಲಕ ಪಂಚರನ್ನು ಠಾಣೆಗೆ ಬರಮಾಡಿಕೊಂಡು ತಾನು, ಚಾಸಾ-2, 3, 5 ಮತ್ತು 6 ರವರು ಇಲಾಖಾ ವಾಹನದಲ್ಲಿ ಸಂಜೆ 6.30 ಗಂಟೆಗೆ ಹೆಗ್ಗಡಹಳ್ಳಿ ಗ್ರಾಮಕ್ಕೆ ಹೋಗಿ ವಾಹನವನ್ನು ಮರೆಯಾಗಿ ನಿಲ್ಲಿಸಿ ನೋಡಿದಾಗ ಆರೋಪಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ ಎಲ್ ನ 71 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿಯ ಮಧ್ಯದ ಪೌಚುಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುತ್ತಾರೆಂದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಉತ್ತರಃ**

**ಪ್ರಶ್ನೆ-9.** ಫ್ರಾಸಾ-4 ಶ್ರೀ.ರಾಜು ಕೆ.ಎನ್, ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ತನಗೆ ಯಾವುದೇ ರಹದಾರಿ ಇರುವುದಿಲ್ಲವೆಂದು ಹೇಳಿರುತ್ತಾರೆ ಮತ್ತು ಸದರಿ ಮಧ್ಯದ ಪೌಚುಗಳನ್ನು ನಂಜನಗೂಡಿನ ಗುರುರಾಜ ವೈನ್ ಸೋರ್ ನಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಎಲ್ಲಾ ಮದ್ಯದ ಪೌಚುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ M ಎಂಬ ಅಕ್ಷರದಿಂದ ಸೀಲ್ ಮಾಡಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚುಗಳನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರ್ ಜರುಗಿಸಿರುತ್ತಾರೆ. ತಾನು ವಶಪಡಿಸಿಕೊಂಡ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮಧ್ಯದ ಪೌಚುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು- 1 ರಿಂದ 71 ಎಂದು ಗುರುತಿಸುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?.

**ಪ್ರಶ್ನೆ-10.** ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

**ಉತ್ತರಃ**

**ಪ್ರಶ್ನೆ-11.** ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

**ಉತ್ತರಃ**

(ಮೇಲಿನ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಕನ್ನಡದಲ್ಲಿ ಓದಿ ಹೇಳಿ ನಂತರ ಆರೋಪಿಯು ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸುತ್ತೇನೆ.)

**ದಿನಾಂಕಃ** 16.04.2026

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.**